# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1351 |
| ಸದಸ್ಯರ ಹೆಸರು | ಡಾ॥ ಬಿ.ಜಿ. ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 30.12.2022 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಸರ್ಕಾರ ನೀಡಿದ ಸವಲತ್ತುಗಳು ಯಾವುವು; (ವಿವರ ನೀಡುವುದು) | 1. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 280 ಕೃಉಇ 2003, ದಿನಾಂಕ: 18.07.2003 ರನ್ವಯ ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಆತ್ಮಹತ್ಯೆ ಪ್ರಕರಣಗಳನ್ನು ಇತ್ಯರ್ಥಪಡಿಸಲು ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ತೀರ್ಮಾನಿಸುವ ಪ್ರತಿ ಅರ್ಹ ಪ್ರಕರಣಕ್ಕೆ ಸದರಿ ಆದೇಶದನ್ವಯ 2003-04 ರಿಂದ ರೂ.1.00 ಲಕ್ಷಗಳ ಪರಿಹಾರ ಧನವನ್ನು ವಿತರಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ : ಕೃಇ 57 ಕೃಉಇ 2015 (ಭಾ-1), ದಿನಾಂಕ: 11.11.2015 ರನ್ವಯ ದಿನಾಂಕ : 01.04.2015 ರಿಂದ ರೂ.5.00 ಲಕ್ಷಗಳಿಗೆ ಹೆಚ್ಚಿಸಿ ಪರಿಹಾರ ಧನವನ್ನು ನೀಡಲಾಗುತ್ತಿದೆ.<br><br>2. ಸರ್ಕಾರದ ಆದೇಶ ಸಂಖ್ಯೆ: ಸಕಇ 186 ಎಸ್ ಡಿ ಸಿ 2017, ದಿನಾಂಕ: 18.05.2017 ರನ್ವಯ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ/ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ವಸತಿ ಶಾಲೆ/ ಆಶ್ರಮ ಶಾಲೆಗಳಲ್ಲಿ ಯಾವುದೇ ತರಗತಿಗೆ ನೇರವಾಗಿ ಪ್ರವೇಶಾವಕಾಶವನ್ನು ಕಲ್ಪಿಸಲು ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.<br><br>3. ಸರ್ಕಾರದ ಆದೇಶ ಸಂಖ್ಯೆ: ಇಡಿ 31 ವಿವಿಧ 2015 ದಿನಾಂಕ 13 ನೇ ನವೆಂಬರ್ 2015 ಮತ್ತು ಸರ್ಕಾರದ ಆದೇಶ ಸಂಖ್ಯೆ: ಇಡಿ 66 ವಿವಿಧ 2016 (ಭಾಗ-1) ದಿನಾಂಕ: 24.07.2017 ರನ್ವಯ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳು ಸ್ನಾತ್ತಕೋತ್ತರ ಪದವಿ ಹಂತದವರೆಗೆ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ/ ಸರ್ಕಾರಿ / ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡಲು ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚವನ್ನು ಉನ್ನತ ಶಿಕ್ಷಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ / ಹಿಂದುಳಿದ ವರ್ಗಗಳ |

<table>
<tr><td></td><td></td><td>ಕಲ್ಯಾಣ ಇಲಾಖೆ / ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಗಳ ವತಿಯಿಂದ ಭರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ64/ಡಿಎಸ್‌ಪಿ/2015 ದಿನಾಂಕ:13/11/2015 ರನ್ವಯ ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡು ಮೃತರಾದ ರೈತರ ಪತ್ನಿಯರಿಗೆ ಕಂದಾಯ ಇಲಾಖೆಯಿಂದ ರೂ.2000/-ಗಳ ವಿಧವಾ ಮಾಸಾಶನವನ್ನು ನೀಡಲಾಗುತ್ತಿದೆ.</td></tr>
<tr><td>ಆ</td><td>ಸದರಿ ಜಿಲ್ಲೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ಎಷ್ಟು ಕುಟುಂಬಗಳಿಗೆ ಸರ್ಕಾರ ಯಾವ ಯಾವ ಸವಲತ್ತುಗಳನ್ನು ನೀಡಲಾಗುತ್ತಿದೆ; (ವಿವರ ನೀಡುವುದು)</td><td>ರೈತರ ಆತ್ಮಹತ್ಯೆ ಪ್ರಕರಣಗಳಡಿ ಪರಿಹಾರವನ್ನು 2019-20ನೇ ಸಾಲಿನವರೆಗೂ ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 43 ವೆಚ್ಚ-4/ 2020 ದಿನಾಂಕ: 19/2/2020 ರಲ್ಲಿ 2020-21ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2235-60-102-1-08-100ರಡಿ ಕಂದಾಯ ಇಲಾಖೆಗೆ ಅನುದಾನವನ್ನು ಒದಗಿಸಿ ಪರಿಹಾರ ವಿತರಣೆಗೆ ಕ್ರಮವಹಿಸಿಲು ತಿಳಿಸಲಾಗಿದೆ.<br><br>ಸುತ್ತೋಲೆ ಸಂಖ್ಯೆ: ಕಂಇ 49 ಎಂಎಸ್‌ಟಿ 2020(ಇ) ದಿನಾಂಕ : 26/8/2020 ರಂತೆ ಉಪ ವಿಭಾಗಾಧಿಕಾರಿಗಳ ಸಮಿತಿಯಲ್ಲಿ ಅರ್ಹ ಪ್ರಕರಣಗಳೆಂದು ಪರಿಗಣಿಸಿ ಅನುಮೋದಿಸಲಾದ ರೈತ ಕುಟುಂಬಕ್ಕೆ ಒಂದು ಬಾರಿ ರೂ.5,00,000/-ಗಳ ಪರಿಹಾರವನ್ನು ವಿತರಿಸಲಾಗುತ್ತಿದೆ.<br><br>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಾಲ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ಮೃತ ರೈತನ ಕುಟುಂಬಕ್ಕೆ ಪರಿಹಾರ ವಿತರಿಸಲಾದ ಪ್ರಕರಣ/ ಅನುದಾನದ ವಿವರ ಈ ಕೆಳಕಂಡಂತಿದೆ;<br><br>
<table>
<tr><th>ಜಿಲ್ಲೆ</th><th>ವರ್ಷ</th><th>ಆತ್ಮಹತ್ಯೆ ಪ್ರಕರಣಗಳು</th><th>ಪರಿಹಾರ ಮೊತ್ತ (ರೂ.ಗಳಲ್ಲಿ)</th></tr>
<tr><td rowspan="3">ಕಲಬುರಗಿ</td><td>2020-21</td><td>62</td><td>3,10,00,000/-</td></tr>
<tr><td>2021-22</td><td>34</td><td>1,70,00,000/-</td></tr>
<tr><td>2022-23</td><td>79</td><td>3,95,00,000/-</td></tr>
<tr><td rowspan="3">ಯಾದಗಿರಿ</td><td>2020-21</td><td>21</td><td>1,05,00,000/-</td></tr>
<tr><td>2021-22</td><td>50</td><td>2,50,00,000/-</td></tr>
<tr><td>2022-23</td><td>34</td><td>1,70,00,000/-</td></tr>
</table>
<br>ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ಮೃತ ರೈತನ ಪತ್ನಿಗೆ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದಡಿ ಮಾಹೆಯಾನ ರೂ.2000/-ಗಳ ಪಿಂಚಣಿಯನ್ನು ನೀಡಲಾಗುತ್ತಿದೆ.</td></tr>
</table>

<table>
<tr><td></td><td></td><td>ಪ್ರಸ್ತುತ ಕಲಬುರಗಿ ಜಿಲ್ಲೆಯಲ್ಲಿ 260 ಫಲಾನುಭವಿಗಳು ಮತ್ತು ಯಾದಗಿರಿ ಜಿಲ್ಲೆಯಲ್ಲಿ 206 ಫಲಾನುಭವಿಗಳು ಈ ಸೌಲಭ್ಯ ಪಡೆಯುತ್ತಿದ್ದಾರೆ.</td></tr>
<tr><td>ಇ</td><td>ಮೃತ ರೈತರ ಮಕ್ಕಳಿಗೆ ಸರ್ಕಾರ ಉಚಿತ ಶಿಕ್ಷಣ ನೀಡುತ್ತಿದೆಯೇ; ನೀಡುತ್ತಿದ್ದಲ್ಲಿ ಎಷ್ಟು ಮಕ್ಕಳು ವಿಧ್ಯಾಭ್ಯಾಸ ಮಾಡುತ್ತಿದ್ದಾರೆ; ಸದರಿ ಮಕ್ಕಳು ಡಾಕ್ಟರ್, ಎಂಜಿನಿಯರಿಂಗ್ ವ್ಯಾಸಂಗ ಮಾಡಲು ಇಷ್ಟಪಟ್ಟಲ್ಲಿ ಅವರಿಗೆ ಉಚಿತ ಶಿಕ್ಷಣ ನೀಡಲಾಗುವುದೆ?/ (ವಿವರ ನೀಡುವುದು)</td><td>ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೃತ ರೈತರ ಮಕ್ಕಳಿಗೆ ಸರ್ಕಾರದ ಆದೇಶ ಸಂ: ಇಡಿ 31 ವಿವಿಧ 2015, ದಿನಾಂಕ: 13/11/2015, ಇಡಿ 66 ವಿವಿಧ 2016 (ಭಾಗ-1), ದಿನಾಂಕ: 24/7/2017 ಹಾಗೂ ಇಡಿ 157 ಟಿಇಸಿ 2018 (ಭಾಗ), ದಿನಾಂಕ:11/7/2018ರಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ನಿಗದಿಪಡಿಸಿರುವ ಶುಲ್ಕಕ್ಕೆ ಸಮಾನ ಶುಲ್ಕವನ್ನು ಮರುಪಾವತಿಸಲು ಆದೇಶಿಸಲಾಗಿರುತ್ತದೆ. ಅದರಂತೆ, 2021-22ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು 08 ವಿದ್ಯಾರ್ಥಿಗಳು ಶುಲ್ಕ ಮರುಪಾವತಿಗಾಗಿ ಅರ್ಜಿ ಸಲ್ಲಿಸಿದ್ದು, ಅವರುಗಳಿಗೆ ಸರ್ಕಾರದ ಆದೇಶದನ್ವಯ ಬೋಧನಾ ಶುಲ್ಕವನ್ನು ಇಲಾಖೆಯ ವತಿಯಿಂದ ಮರುಪಾತಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ;
<table>
<tr><th>ಕ್ರ. ಸಂ.</th><th>ವಿದ್ಯಾರ್ಥಿಯ ಹೆಸರು</th><th>ತಾಲ್ಲೂಕಾ</th><th>ವ್ಯಾಸಂಗ ಮಾಡುತ್ತಿರುವ ಸಂಸ್ಥೆ</th><th>ವರ್ಷ</th><th>ಮೊತ್ತ ರೂ. ಗಳಲ್ಲಿ</th></tr>
<tr><td>1</td><td>ಇಂದ್ರುಜ ಶೇಖಪ್ಪ ಮಣಕೂರ ಲೇಟ್ ಶೇಕಪ್ಪ</td><td>ರಾಣಿಬೆನ್ನೂರು</td><td>ಎಸ್.ಟಿ.ಜೆ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ರಾಣಿಬೆನ್ನೂರು</td><td>2020-21</td><td>18,000/-</td></tr>
<tr><td>2</td><td>ಸಹನ ಎಸ್ ಪಿ ಲೇಟ್ ಪದ್ಮರಾಜು</td><td>ಹಾಸನ</td><td>ಬಿಜಿಎಸ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ನಾಗಮಂಗಲ</td><td>2020-21</td><td>18,000/-</td></tr>
<tr><td>3</td><td>ಸಚಿನ ಎಸ್ ಪಿ ಲೇಟ್ ಪದ್ಮರಾಜು</td><td>ಹಾಸನ</td><td>ಎಟಿಎಂಇ ಕಾಲೇಜು ಆಫ್ ಇಂಜಿನಿಯರಿಂಗ್, ಮೈಸೂರು</td><td>2020-21 & 2021-22</td><td>18,000/-</td></tr>
</table>
</td></tr>
</table>

ಸಂಖ್ಯೆ : AGRI –AML/289/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು